ಧರ್ಮ ಕಾರ್ಯಗಳಿಂದ ಸಂಸ್ಕೃತಿ ಸಂಸ್ಕಾರ ಲಭಿಸಲು ಸಾಧ್ಯ: ಚಂದ್ರಶೇಖರ ಶ್ರೀ

ಉದಯಕಾಲ ನ್ಯೂಸ್

ರಾಮದುರ್ಗ: ಇಂದಿನ ಆಧುನಿಕ ಯುಗದಲ್ಲಿ ಧರ್ಮ ಕಾರ್ಯಗಳು ನಡೆಯಲು ಗ್ರಾಮಸ್ಥರ ಸಹಾಯಕ ಸಹಕಾರ ಅಗತ್ಯವಿದೆ. ಹಿರೇತಡಸಿ ಗ್ರಾಮ ಚಿಕ್ಕದಾದರೂ ಭಕ್ತಿ-ಭಾವಕ್ಕೆ ಕಡಿಮೆ ಇಲ್ಲ ಎಂಬುವುದು ಅರಿಯಲು ರಥೋತ್ಸವ ನಿರ್ಮಾಣ ಮಾಡಿದ್ದೇ ಸಾಕ್ಷಿಯಾಗಿದೆ ಎಂದು ಮುಳ್ಳೂರ ಅನ್ನದಾನೇಶ್ವರ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಹಿರೇತಡಸಿ ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಏರ್ಪಡಿಸಿದ ಧಾರ್ಮಿಕ ಚಿಂತನ ಸಭೆ ಹಾಗೂ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧಾರ್ಮಿಕ ಕಾರ್ಯಕ್ರಮಗಳ ಆಯೋಜನೆಯಿಂದ ಗ್ರಾಮದ ಜನತೆಯಲ್ಲಿ ಸಂಸ್ಕೃತಿ ಸಂಸ್ಕಾರ ದೊರೆಯಲು ಸಾಧ್ಯವಿದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಹೊಸಕೇರಿ-ಬಸವನಗರ ಹಾಗೂ ಖಜೂರಿ ಕೋರಣೇಶ್ವರ ಮಠದ ಶ್ರೀ ಮುರುಘೇಂದ್ರ ಕೋರಣೇಶ್ವರ ಶಿವಯೋಗಿಗಳು ಮಾತನಾಡಿ, ಬಸವಣ್ಣನವರ ಕಾಯಕ ದಾಸೋಹ ತತ್ವವನ್ನು ಎಲ್ಲರೂ ಜೀವನದಲ್ಲಿ ಅಳವಡಿಕೆ ಮಾಡಿಕೊಂಡದಲ್ಲಿ ಮಾತ್ರ, ಜೀವನದಲ್ಲಿ ನೆಮ್ಮದಿಯ ಬದುಕು ನಡೆಸಲು ಸಾಧ್ಯವಿದೆ ಎಂದರು.

ಶಿವಪೇಠ ಆಶ್ರಮದ ಆಧ್ಯಾತ್ಮಿಕ ಚಿಂಕರ ಗುರುರಾಜ ಕೊಣ್ಣೂರ ಮಾತನಾಡಿ, ಧಾನ, ಧರ್ಮ, ಪರೋಪಕಾರ ಗುಣಗಳನ್ನು ಅಳವಡಿಕೆ ಮಾಡಿಕೊಂಡಲ್ಲಿ ಅವು ವ್ಯಕ್ತಿಯನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯುತ್ತವೆ. ಅವುಗಳೇ ನಿಜವಾದ ಸಂಪತ್ತು ಎಂದು ಅರಿತು ನಡೆಯಬೇಕು ಎಂದರು.

ಆಧ್ಯಾತ್ಮಿಕ ಚಿಂತಕರಾದ ಬಸಪ್ಪ ಕಮ್ಮಾರ, ಶೇಖಣ್ಣ ಕುಲಕರ್ಣಿ, ಡಾ. ಸುಭಾಸ ಶಿವಪಿಂಪಗೇರ ಸೇರಿದಂತೆ ಇತರರು ಮಾತನಾಡಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅಧಿಕ ಅಂಕಗಳನ್ನು ಪಡೆದ ಗ್ರಾಮದ ವಿದ್ಯಾರ್ಥಿಗಳು, ರಥ ನಿರ್ಮಿಸಿದ ಪ್ರಕಾಶ ಬಡಿಗೇರ ಅವರನ್ನು ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಬಸನಗೌಡ ಪಾಟೀಲ, ಶೇಖರಗೌಡ ಪಾಟೀಲ, ಗಣಪತಿ ಜಾಧವ, ರಾಚಪ್ಪ ಜಾಧವ, ರಮೇಶ ಜಾಧವ, ಬಸವರಾಜ ಜಾಧವ, ಪುಂಡಲೀಕ ಜಾಧವ, ಹಣಮಂತ ಜಾಧವ, ಮಹೇಶ ಜಾಧವ, ಶ್ರೀಶೈಲ ಬಡಿಗೇರ, ಮಾರುತಿ ಉಪ್ಪಾರ, ಮುತ್ತನಗೌಡ ಪಾಟೀಲ, ಬಾಪುಗೌಡ ಪಾಟೀಲ, ಸಹದೇವಪ್ಪ ಜಾಧವ, ಯಲ್ಲಪ್ಪ ಜಾಧವ ಸೇರಿದಂತೆ ಇತರರಿದ್ದರು.

ಪತ್ರಕರ್ತ ಗೌಡಪ್ಪಗೌಡ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಗಣೇಶೋತ್ಸವದಲ್ಲಿ ಡಿಜೆ ಅಬ್ಬರ ಬೇಡ; ಸಂಪ್ರದಾಯದಂತೆ ಆಚರಿಸಿ: ಪೊಲೀಸ್ ಆಯುಕ್ತ ಪ್ರಕಾಶ ನಿಕಮ್

ಉದಯಕಾಲ ನ್ಯೂಸ್

ಬೆಳಗಾವಿ: ಹಬ್ಬ-ಹರಿದಿನಗಳನ್ನು ಆಚರಿಸುವಾಗ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರವಹಿಸುವುದು ಎಲ್ಲರ ನಾಗರಿಕ ಜವಾಬ್ದಾರಿಯಾಗಿದೆ. ಸಮಾಜದ ಹಿತಾಸಕ್ತಿ ಹಾಗೂ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು, ಪ್ರಸಕ್ತ ಸಾಲಿನ ಗಣೇಶೋತ್ಸವವನ್ನು ಎಲ್ಲರೂ ಅತ್ಯಂತ ಸಡಗರ, ಭಕ್ತಿ ಮತ್ತು ಶಾಂತಿಯುತ ವಾತಾವರಣದಲ್ಲಿ ಆಚರಿಸಬೇಕು ಎಂದು ನಗರ ಪೊಲೀಸ್ ಆಯುಕ್ತ ಪ್ರಕಾಶ ನಿಕಮ ಅವರು ಸಾರ್ವಜನಿಕ ಮಧ್ಯಸ್ಥಿಕೆ ಗಣೇಶೋತ್ಸವ ಮಹಾಮಂಡಳ ಹಾಗೂ ವಿವಿಧ ಗಣೇಶ ಮಂಡಳಿಗಳ ಪದಾಧಿಕಾರಿಗಳಿಗೆ ಕಳಕಳಿಯ ವಿನಂತಿ ಮಾಡಿಕೊಂಡಿದ್ದಾರೆ.

ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಆಯುಕ್ತಾಲಯದ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಶಾಂತಿಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ಈ ಸಭೆಯಲ್ಲಿ ಪಾಲಿಕೆ ಆಯುಕ್ತ ಕಾರ್ತಿಕ್ ಎಂ., ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪೊಲೀಸ್ ಡಿಸಿಪಿ ನಾರಾಯಣ ಬರಮನಿ, ಅಪರಾಧ ಹಾಗೂ ಸಂಚಾರ ವಿಭಾಗದ ಡಿಸಿಪಿ ನಿರಂಜನರಾಜ್ ಅರಸ್ ಸೇರಿದಂತೆ ಹಲವು ಗಣ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

ಅತಿಯಾದ ಶಬ್ದದ ದುಷ್ಪರಿಣಾಮಗಳ ಬಗ್ಗೆ ತಜ್ಞರ ಎಚ್ಚರಿಕೆ: ಸಭೆಯ ಆರಂಭದಲ್ಲಿ ತಜ್ಞ ವೈದ್ಯರ ಸಮ್ಮುಖದಲ್ಲಿ ಎಲ್‌ಇಡಿ ಪರದೆಯ ಮೂಲಕ ಪಟಾಕಿ, ಲೇಸರ್ ಬೆಳಕು ಹಾಗೂ ಡಿಜೆ ಧ್ವನಿವರ್ಧಕಗಳಿಂದ ಉಂಟಾಗುವ ತೀವ್ರ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಶ್ರವಣ ದೋಷದ ಗಂಡಾಂತರ: 90 ಡೆಸಿಬಲ್‌ಗಿಂತ ಅಧಿಕ ಶಬ್ದದ ಡಿಜೆ ಧ್ವನಿಯನ್ನು ಬಳಸಿದರೆ ಮಾನವನ ಕಿವಿ ಹಾಗೂ ಶ್ರವಣ ನರಗಳ ಮೇಲೆ ತೀವ್ರ ಹಾನಿಕಾರಕ ಪರಿಣಾಮ ಬೀರುತ್ತದೆ.

ಕಣ್ಣಿಗೆ ಆಪತ್ತು: ಅತ್ಯಾಧುನಿಕ ಲೇಸರ್ ದೀಪಗಳ ಪ್ರಖರತೆಯು ಕಣ್ಣಿನ ದೃಷ್ಟಿ ಮಂದಗೊಳಿಸುವ ಅಥವಾ ಹಾನಿ ಮಾಡುವ ಸಾಧ್ಯತೆಯಿದೆ.

ಕಳೆದ ಬಾರಿಯ ದುರಂತ: ಕಳೆದ ವರ್ಷ ಹಿರೆ ಬಾಗೇವಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅತಿಯಾದ ಡಿಜೆ ಸದ್ದಿನ ಪ್ರಭಾವದಿಂದ ಬಲವಾದ ತೊಂದರೆಗೊಳಗಾಗಿ 7 ಜನರಿಗೆ ಕಿವುಡುತನ ಉಂಟಾಗಿರುವುದು ವೈದ್ಯಕೀಯ ತಪಾಸಣೆಯಿಂದ ದೃಢಪಟ್ಟಿದ್ದು, ಸಿವಿಲ್ ಆಸ್ಪತ್ರೆಯಿಂದ ಅವರಿಗೆ ಪ್ರಮಾಣಪತ್ರವನ್ನೂ ನೀಡಲಾಗಿದೆ.

ಆರೋಗ್ಯದ ಮೇಲೆ ದುಷ್ಪರಿಣಾಮ: ಹೃದಯ ರೋಗಿಗಳು, ವೃದ್ಧರು ಹಾಗೂ ಹಾಲಿನ ಕಂದಮ್ಮಗಳು ಸೇರಿದಂತೆ ಸಣ್ಣ ಮಕ್ಕಳ ಆರೋಗ್ಯದ ಮೇಲೆ ಈ ಕರ್ಕಶ ಶಬ್ದವು ಗಂಭೀರ ಪರಿಣಾಮ ಬೀರುತ್ತದೆ. ಹೀಗಾಗಿ ಆಸ್ಪತ್ರೆಗಳು, ಶಾಲಾ-ಕಾಲೇಜುಗಳು ಹಾಗೂ ಜನವಸತಿ ಪ್ರದೇಶಗಳಲ್ಲಿ ಡಿಜೆ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು. ಭಕ್ತಿ ಮುಖ್ಯವೇ ಹೊರತು ಅತಿರೇಕದ ಪ್ರದರ್ಶನವಲ್ಲ ಎಂದು ಸಿವಿಲ್ ಆಸ್ಪತ್ರೆಯ ಇಎನ್‌ಟಿ ತಜ್ಞೆ ಡಾ. ಶೃತಿ ಕಿವಿಮಾತು ಹೇಳಿದರು.

ಸಭೆಯಲ್ಲಿ ಮುಖಂಡರ ಆಕ್ರೋಶ ಹಾಗೂ ಸಲಹೆಗಳು: ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಮುಖರಾದ ರಮಾಕಾಂತ ಕೊಂಡುಸ್ಕರ್, ರಂಜಿತ್ ಚೌಹಾಣ್-ಪಾಟೀಲ್, ಪಾಲಿಕೆ ಸದಸ್ಯ ರವಿ ಸಾಳುಂಕೆ ಸೇರಿದಂತೆ ಹಲವರು ಮಾತನಾಡಿ, ನಗರದ ರಸ್ತೆಗಳಲ್ಲಿ ಇನ್ನೂ ಗುಂಡಿಗಳು ಹಾಗೆಯೇ ಉಳಿದಿವೆ. ಒಳಚರಂಡಿ ತೆರೆದ ಭಾಗಗಳು ಮುಚ್ಚಿಲ್ಲ. ಹಬ್ಬದ ಸಂಭ್ರಮದಲ್ಲಿ ಬರುವ ಭಕ್ತಾದಿಗಳಿಗೆ ಇದರಿಂದ ಪ್ರಾಣಾಪಾಯ ಎದುರಾಗುವ ಸಂಭವವಿದೆ. ಡಿಜೆ ಹಾಗೂ ಪಟಾಕಿ ಮೇಲೆ ನಿರ್ಬಂಧ ಹೇರುವ ಬದಲು ಅವುಗಳನ್ನು ಉತ್ಪಾದಿಸುವ ಕಾರ್ಖಾನೆಗಳನ್ನೇ ಬಂದ್ ಮಾಡಬೇಕು. ಪಾಲಿಕೆ ನೀಡಿದ ಭರವಸೆಗಳನ್ನು ಈಡೇರಿಸಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಅಲ್ಲದೆ, ನೂತನ ಪೊಲೀಸ್ ಆಯುಕ್ತರು ಹಳೆಯ ಅಧಿಕಾರಿಗಳ ಮಾದರಿಯಲ್ಲೇ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಎಲ್ಲರೂ ಅವರೊಂದಿಗೆ ಸಹಕರಿಸಿ ಹಬ್ಬವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಪೊಲೀಸ್ ಆಯುಕ್ತರ ಅಂತಿಮ ಸಂದೇಶ: ಎಲ್ಲರ ಅಹವಾಲುಗಳನ್ನು ಸಾವಧಾನದಿಂದ ಆಲಿಸಿದ ಪೊಲೀಸ್ ಆಯುಕ್ತ ಪ್ರಕಾಶ ನಿಮ, ನಾವು ಯಾರಿಗೂ ಯಾವುದೇ ಅನಗತ್ಯ ನಿರ್ಬಂಧಗಳನ್ನು ಹೇರುತ್ತಿಲ್ಲ. ಆದರೆ, ನಮ್ಮ ಹಬ್ಬದ ಆಚರಣೆಯಿಂದ ಸಮಾಜದ ಇತರರಿಗೆ ಅಥವಾ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚೆತ್ತುಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಎಲ್ಲರೂ ಸಾಂಪ್ರದಾಯಿಕ ಹಾಗೂ ಅರ್ಥಪೂರ್ಣ ಪದ್ಧತಿಯಲ್ಲಿ ಗಣೇಶೋತ್ಸವವನ್ನು ಅತ್ಯಂತ ಶಾಂತಿಯುತವಾಗಿ ಆಚರಿಸಬೇಕು ಎಂದು ಮತ್ತೊಮ್ಮೆ ಮನವಿ ಮಾಡಿದರು.

ಭೀಕರ ಅಪಘಾತ; ದ್ವಿಚಕ್ರ ವಾಹನಕ್ಕೆ ಅಜ್ಞಾತ ವಾಹನ ಡಿಕ್ಕಿ, ತಂದೆ-ಮಗ ಸಾವು

ಉದಯಕಾಲ ನ್ಯೂಸ್

ಖಾನಾಪುರ: ತಾಲೂಕಿನ ತೋಪಿನಕಟ್ಟಿ ರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಲಕ್ಕೇಬೈಲು ಗ್ರಾಮದ ತಂದೆ ಹಾಗೂ ಮಗ ಸ್ಥಳದಲ್ಲೇ ಮತ್ತು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ದುರ್ಘಟನೆಯಿಂದ ಲೋಕೋಳಿ ಮತ್ತು ಲಕ್ಕೇಬೈಲು ಗ್ರಾಮಗಳಲ್ಲಿ ತೀವ್ರ ಶೋಕಮೂಡಿದೆ.

ಅಶೋಕ ನಾಂದುಕರ್ (60) ಮತ್ತು ಅವರ ಮಗ ಪುಂಡಲಿಕ್ ಅಶೋಕ್ ನಾಂದುಕರ್ (27) ಮೃತ ದುರ್ದೈವಿಗಳು. ಇವರು ಸೋಮವಾರ ಬೆಳಿಗ್ಗೆ 7.30ರ ಸುಮಾರಿಗೆ ತಮ್ಮ ಕೆಎ-22-ಎಚ್‌ಎಸ್-4129 ನೇಮಾಂಕದ ಸ್ಪ್ಲೆಂಡರ್ ದ್ವಿಚಕ್ರ ವಾಹನದಲ್ಲಿ ತೋಪಿನಕಟ್ಟಿ ಮಾರ್ಗವಾಗಿ ಯಳ್ಳೂರಿಗೆ ತೆರಳುತ್ತಿದ್ದರು. ಈ ವೇಳೆ ಲೋಕೋಳಿ ಕ್ರಾಸ್‌ನಿಂದ ತೋಪಿನಕಟ್ಟಿ ರಸ್ತೆಗೆ ಬರುತ್ತಿದ್ದಂತೆ ಎದುರಿನಿಂದ ಬಂದ ಅಜ್ಞಾತ ವಾಹನವು ಇವರ ಬೈಕಿಗೆ ವೇಗವಾಗಿ ಬಂದು ಭೀಕರವಾಗಿ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ಭೀಕರತೆಗೆ ಬೈಕ್ ರಸ್ತೆ ಬದಿಗೆ ಉರುಳಿಬಿದ್ದಿದ್ದು, ತೀವ್ರ ಪೆಟ್ಟಾಗಿದ್ದ ಮಗ ಪುಂಡಲಿಕ್ ನಾಂದುಕರ್ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ತಂದೆ ಅಶೋಕ್ ನಾಂದುಕರ್ ಗಂಭೀರವಾಗಿ ಗಾಯಗೊಂಡಿದ್ದರು. ಅಪಘಾತದ ಶಬ್ದ ಕೇಳಿ ಸ್ಥಳೀಯರು ಧಾವಿಸಿ ಬಂದು ಪೊಲೀಸರಿಗೆ ಹಾಗೂ ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಲಕ್ಕೇಬೈಲಿನ ಸಂಬಂಧಿಕರು ಮತ್ತು ಗ್ರಾಮಸ್ಥರು ಗಾಯಾಳು ಅಶೋಕ್ ಅವರನ್ನು ಪ್ರಥಮ ಚಿಕಿತ್ಸೆಗಾಗಿ ಖಾನಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು.

ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅಶೋಕ್ ನಾಂದುಕರ್ ಕೂಡ ಮೃತಪಟ್ಟರು. ಸ್ಥಳಕ್ಕೆ ಖಾನಾಪುರ ಪೊಲೀಸ್ ಠಾಣೆಯ ನಿರೀಕ್ಷಕ ಲಾಲಸಾಬ ಗವಂಡಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೃತ ಪುಂಡಲಿಕ್ ಅವರ ಮೃತದೇಹವನ್ನು ಖಾನಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಅಶೋಕ್ ಅವರ ಮೃತದೇಹವನ್ನು ಬಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ನಂತರ ರಾತ್ರಿ ಲಕ್ಕೇಬೈಲು ಗ್ರಾಮದಲ್ಲಿ ಇಬ್ಬರ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಮೃತ ಅಶೋಕ್ ನಾಂದುಕರ್ ಪತ್ನಿ ಹಾಗೂ ನಾಲ್ವರು ಹೆಣ್ಣುಮಕ್ಕಳನ್ನು ಅಗಲಿದ್ದಾರೆ. ಈ ಕುರಿತು ಖಾನಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಇಟ್ಟಿಗೆ ಸಾಗಣೆ ವಾಹನದ ಮೇಲೆ ಶಂಕೆ: ಈ ರಸ್ತೆಯಲ್ಲಿ ಇಟ್ಟಿಗೆಗಳನ್ನು ಸಾಗಿಸುವ ಟೆಂಪೋಗಳ ಸಂಚಾರ ಅಧಿಕವಾಗಿದೆ. ಬೆಳಿಗ್ಗೆ ವೇಳೆ ಇಟ್ಟಿಗೆ ತುಂಬಿಕೊಂಡು ಅಥವಾ ಇಟ್ಟಿಗೆ ಖಾಲಿ ಮಾಡಿಕೊಂಡು ವಾಪಸ್ ತೆರಳುತ್ತಿದ್ದ ಅಜ್ಞಾತ ಟೆಂಪೋವೇ ಈ ಅಪಘಾತವೆಸಗಿರಬಹುದು ಎಂದು ತೋಪಿನಕಟ್ಟಿ, ಲೋಕೋಳಿ ಹಾಗೂ ಲಕ್ಕೇಬೈಲು ಗ್ರಾಮಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ.

ನುಲಿ ಚಂದಯ್ಯನವರ ಕಾಯಕ ನಿಷ್ಠೆ ಯುವಕರಿಗೆ ಪ್ರೇರಣೆ: ಶಶಿಕುಮಾರ ಭಜಂತ್ರಿ

ಉದಯಕಾಲ ನ್ಯೂಸ್

ಅಥಣಿ: ಕಾಯಕದಲ್ಲಿ ನಿಷ್ಠೆ, ಬದುಕಿನಲ್ಲಿ ಸರಳತೆ, ಸಮಾಜದಲ್ಲಿ ಸಮಾನತೆ' ಎಂಬ ಶರಣ ನೂಲಿ ಚಂದಯ್ಯನವರ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗೆ ನಿಜವಾದ ಅರ್ಥ ಸಿಗಲಿದೆ. ಶರಣ ನೂಲಿ ಚಂದಯ್ಯನವರು ಕಾಯಕವೇ ಕೈಲಾಸ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಕಾಯಕಕ್ಕೆ ಮಹತ್ವ ನೀಡಿದ ಶರಣರಲ್ಲಿ ಪ್ರಮುಖರಾಗಿದ್ದಾರೆ ಎಂದು ಶರಣ ನುಲಿ ಚಂದಯ್ಯ ಕೊರಮ ಸಮಾಜ ಸೇವಾ ಸಂಘದ ಅಧ್ಯಕ್ಷ ಶಶಿಕುಮಾರ ಶಿವಾಜಿ ಭಜಂತ್ರಿ ಹೇಳಿದರು.

ಅವರು ಪಟ್ಟಣದ ವಿಜಯಪುರ ರಸ್ತೆಗೆ ಹೊಂದಿಕೊಂಡಿರುವ ಕಾಯಕಯೋಗಿ ಶ್ರೀ ಶಿವಶರಣ ನೂಲಿ ಚಂದಯ್ಯ ಕೊರಮ ಸಮಾಜ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶರಣ ನುಲಿ ಚಂದಯ್ಯನವರ ಜಯಂತಿ ಕಾರ್ಯಕ್ರಮದ ಭಾಗವಹಿಸಿ ಮಾತನಾಡಿದರು.12ನೇ ಶತಮಾನದ ಶರಣ ಪರಂಪರೆಯಲ್ಲಿ ನೂಲಿ ಚಂದಯ್ಯನವರು ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಪ್ರಾಮಾಣಿಕ ದುಡಿಮೆಯ ಮಹತ್ವವನ್ನು ಸಮಾಜಕ್ಕೆ ಸಾರಿದ ಅವರು, ಶ್ರಮಜೀವಿಗಳ ಗೌರವವನ್ನು ಎತ್ತಿಹಿಡಿದ ಮಹಾನ್ ಚಿಂತಕರಾಗಿದ್ದರು. ನೂಲಿ ಚಂದಯ್ಯನವರ ಜೀವನದಲ್ಲಿ ಕಾಯಕನಿಷ್ಠೆ, ಸರಳತೆ, ಪ್ರಾಮಾಣಿಕತೆ ಮತ್ತು ಯಾವುದೇ ಕೆಲಸವನ್ನು ಕೀಳಾಗಿ ಕಾಣದೆ, ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಮಾಡುವುದೇ ನಿಜವಾದ ಧರ್ಮ ಎಂಬ ಸಂದೇಶವನ್ನು ಸಾರಿದ್ದಾರೆ ಇಂತಹ ಮಹಾನ್ ಶರಣರ ಆದರ್ಶಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾಯಕಕ್ಕೆ ನೀಡಿದ ಮಹತ್ವ: ಶರಣರ ಪರಂಪರೆಯಲ್ಲಿ ಕಾಯಕಕ್ಕೆ ವಿಶೇಷ ಸ್ಥಾನವಿದೆ. ಕಾಯಕದಲ್ಲಿ ಪ್ರಾಮಾಣಿಕತೆ, ಬದುಕಿನಲ್ಲಿ ಸರಳತೆ ಹಾಗೂ ಸಮಾಜದ ಬಗ್ಗೆ ಕಾಳಜಿ ಹೊಂದಿದ್ದ ಅವರ ಜೀವನ ಇಂದಿಗೂ ಎಲ್ಲರಿಗೂ ಮಾದರಿಯಾಗಿದೆ. ಶರಣ ನುಲಿ ಚಂದಯ್ಯನವರ ಜಯಂತಿ ಆಚರಣೆ ಕೇವಲ ಒಂದು ಆಚರಣೆಯಾಗದೆ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು ಅವರ ಆದರ್ಶಗಳು ಇಂದಿನ ಯುವ ಜನತೆಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶರಣ ನುಲಿ ಚಂದಯ್ಯ ಕೊರಮ ಸಮಾಜ ಸೇವಾ ಸಂಘದ ಅಧ್ಯಕ್ಷ ಶಶಿಕುಮಾರ ಶಿವಾಜಿ ಭಜಂತ್ರಿ ನೇತೃತ್ವದಲ್ಲಿ ಕಾಯಕಯೋಗಿ ಶ್ರೀ ಶರಣ ನೂಲಿ ಚಂದಯ್ಯನವರ ಭಾವಚಿತ್ರಕ್ಕೆ ಭಕ್ತಿಭಾವದಿಂದ ಪೂಜೆ ಸಲ್ಲಿಸಿ, ಪುಷ್ಪ ನಮನ ಅರ್ಪಿಸಲಾಯಿತು. ವೃತ್ತಕ್ಕೆ ನಾಮಕರಣ ಮಾಡಿ ಸಕಲ ವಾದ್ಯ ಮೇಳದೊಂದಿಗೆ ಮೆರವಣಿಗೆ ನಡೆಯಿತು

ಕಾರ್ಯಕ್ರಮದಲ್ಲಿ ಹಿರಿಯರಾದ ಲಕ್ಷ್ಮಣ ಭಜಂತ್ರಿ, ಸಂಘದ ಸದಸ್ಯರಾದ ಪ್ರಕಾಶ ಭಜಂತ್ರಿ, ಗೋಪಾಲ ಭಜಂತ್ರಿ, ಶಿವಶಂಕರ ಭಜಂತ್ರಿ, ರಮೇಶ ಭಜಂತ್ರಿ, ಸಂಜು ಭಜಂತ್ರಿ, ಸತ್ಯರಾಜ್ ಭಜಂತ್ರಿ, ಮುತ್ತಪ್ಪ ಭಜಂತ್ರಿ, ಉಮೇಶ್ ಭಜಂತ್ರಿ, ರಾಜು ಭಜಂತ್ರಿ, ರಾಮಣ್ಣ ಭಜಂತ್ರಿ, ನಾಗೇಶ್ ಭಜಂತ್ರಿ ,ಮಹೇಶ್ ಭಜಂತ್ರಿ, ಪರಶುರಾಮ ಭಜಂತ್ರಿ, ಮಹಾಂತೇಶ ಭಜಂತ್ರಿ ಸೇರಿದಂತೆ ಹಲವರು ಕೊರಮ ಸಮಾಜದ ಮುಖಂಡರು, ಕಮಿಟಿ ಪದಾಧಿಕಾರಿಗಳು, ಹಾಗೂ ಸಮಾಜದ ಬಾಂಧವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಣೇಶೋತ್ಸವ ಶಾಂತಿಯುತ ಆಚರಣೆಗೆ ಮುನ್ನೆಚ್ಚರಿಕೆ ವಹಿಸಿ

ಮೆರವಣಿಗೆಗೆ ನಿಗದಿತ ಮಾರ್ಗ, ಧ್ವನಿವರ್ಧಕ ಬಳಕೆಗೆ ನಿಯಮ ಪಾಲನೆ ಕಡ್ಡಾಯ: ಪಿಎಸ್‌ಐ ಮಾಳಪ್ಪ ಪೂಜಾರಿ

ಉದಯಕಾಲ ನ್ಯೂಸ್

ಮುಗಳಖೋಡ: ಗಣೇಶ ಚತುರ್ಥಿ ಹಬ್ಬವನ್ನು ಶಾಂತಿ, ಸೌಹಾರ್ದತೆ ಹಾಗೂ ಸಂಭ್ರಮದಿಂದ ಆಚರಿಸುವಂತೆ ಪೊಲೀಸ್ ಇಲಾಖೆ ಗಣೇಶೋತ್ಸವ ಸಮಿತಿಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರಿಗೆ ಮನವಿ ಮಾಡಿದೆ.

ಪುರಸಭೆ ಸಭಾಭವನದಲ್ಲಿ ಭಾನುವಾರ ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಿಎಸ್‌ಐ ಮಾಳಪ್ಪ ಪೂಜಾರಿ, ಗಣೇಶೋತ್ಸವ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಉತ್ಸವ ಸಮಿತಿ ಸದಸ್ಯರು ಮುನ್ನೆಚ್ಚರಿಕೆ ವಹಿಸಬೇಕು. ಗಣೇಶ ಮೂರ್ತಿ ವಿಸರ್ಜನೆ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಸಣ್ಣಪುಟ್ಟ ಘಟನೆಗಳು ದೊಡ್ಡದಾಗಿ ಪರಿಣಮಿಸಿ ಶಾಂತಿ ಭಂಗಕ್ಕೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಎಲ್ಲರೂ ಎಚ್ಚರಿಕೆ ವಹಿಸಬೇಕು. ಗಣೇಶೋತ್ಸವ ಮೆರವಣಿಗೆಯನ್ನು ನಿಗದಿತ ಮಾರ್ಗದಲ್ಲಿಯೇ ನಡೆಸಬೇಕು. ಧ್ವನಿವರ್ಧಕ ಬಳಕೆಗೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಪುರಸಭೆ ಮುಖ್ಯಾಧಿಕಾರಿ ಮಾತನಾಡಿ, ಮುಗಳಖೋಡದಲ್ಲಿ ಸುಮಾರು 26 ಸಾರ್ವಜನಿಕ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಸಾಧ್ಯತೆಯಿದ್ದು, ಎಲ್ಲ ಸಮಿತಿಗಳು ಕಡ್ಡಾಯವಾಗಿ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪನಾ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಮೂರ್ತಿ ಪ್ರತಿಷ್ಠಾಪನೆಯಿಂದಾಗಿ ಸಂಚಾರಕ್ಕೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ವಿಸರ್ಜನೆ ವ್ಯವಸ್ಥೆಗೆ ಆಗ್ರಹ: ಗಣೇಶ ಮೂರ್ತಿ ವಿಸರ್ಜನೆಗಾಗಿ ಪುರಸಭೆಯಿಂದ ದೊಡ್ಡ ಗಾತ್ರದ ಗುಂಡಿ ನಿರ್ಮಿಸಿ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಬಾವಿಯಲ್ಲಿ ಸ್ವಚ್ಛತೆ ಹಾಗೂ ಬೆಳಕಿನ ವ್ಯವಸ್ಥೆ ಕಲ್ಪಿಸುವಂತೆ ಕಳೆದ 5-6 ವರ್ಷಗಳಿಂದ ಮನವಿ ಮಾಡುತ್ತಿದ್ದರೂ ಪುರಸಭೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸಭೆಯಲ್ಲಿ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ಅರಭಾವಿ ಫೌಂಡೇಶನ್ ಅಧ್ಯಕ್ಷ ಸಂತೋಷ ಅರಭಾವಿ, ಗೋಪಾಲ ಗೋಕಾಕ, ಯಲ್ಲಪ್ಪ ಖೇತಗೌಡರ, ಕಾಂತು ಖೇತಗೌಡರ, ಚಂದು ಗೌಳತಿ ಸೇರಿದಂತೆ ಗಣೇಶೋತ್ಸವ ಸಮಿತಿಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಅಂಚೆ ಕಛೇರಿಗಳಲ್ಲಿ ಆಧಾರ್ ಸೇವೆಗಳು ಲಭ್ಯ

ಉದಯಕಾಲ ನ್ಯೂಸ್

ಬೆಳಗಾವಿ: ಸಾರ್ವಜನಿಕರ ಅನುಕೂಲಕ್ಕಾಗಿ ಭಾರತೀಯ ಅಂಚೆ ಇಲಾಖೆಯ ಗೋಕಾಕ ಅಂಚೆ ವಿಭಾಗದ ಅಂಚೆ ಕಚೇರಿಗಳಾದ ಗೋಕಾಕ ಪ್ರಧಾನ ಅಂಚೆ ಕಚೇರಿ, ಸಂಕೇಶ್ವರ ಮುಖ್ಯ ಅಂಚೆ ಕಚೇರಿ, ಹುಕ್ಕೇರಿ ಮುಖ್ಯ ಅಂಚೆ ಕಚೇರಿ, ಘಟಪ್ರಭಾ ಉಪ ಅಂಚೆ ಕಚೇರಿ, ಹಿಡಕಲ್ ಡ್ಯಾಂ ಉಪ ಅಂಚೆ ಕಚೇರಿ, ಮೂಡಲಗಿ ಉಪ ಅಂಚೆ ಕಚೇರಿ, ಅಂಕಲಗಿ ಉಪ ಅಂಚೆ ಕಚೇರಿ, ಠಾಣಾ ಹತ್ತರಗಿ ಉಪ ಅಂಚೆ ಕಚೇರಿಗಳಲ್ಲಿ ಆಧಾರ್ ನೋಂದಣಿ ಹಾಗೂ ಆಧಾರ್ ನವೀಕರಣ/ತಿದ್ದುಪಡಿ ಸೇವೆಗಳು ಲಭ್ಯವಿರುತ್ತವೆ.

ಸಾರ್ವಜನಿಕರು ಅಗತ್ಯ ದಾಖಲೆಗಳೊಂದಿಗೆ ಮೇಲ್ಕಂಡ ಅಂಚೆ ಕಚೇರಿಗಳಿಗೆ ಭೇಟಿ ನೀಡಿ ಆಧಾರ್ ಸೇವೆಗಳ ಸೌಲಭ್ಯವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸಮೀಪದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಗೋಕಾಕ ಅಂಚೆ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವ-ಪಾರ್ವತಿಯರ ಕಲ್ಯಾಣ ಮಹೋತ್ಸವ

ಉದಯಕಾಲ ನ್ಯೂಸ್

ರಾಮದುರ್ಗ: ಪಟ್ಟಣದ ನಿಂಗಾಪೂರ ಪೇಟೆಯ ಪುರಾತನ ಈಶ್ವರ ದೇವಸ್ಥಾನದಲ್ಲಿ ಈಶ್ವರ ದೇವರ ಪ್ರತಿಷ್ಠಾಪಣೆ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶಿವ ಪಾರ್ವತಿ ಕಲ್ಯಾಣೋತ್ಸವವು ಸಮಾರಂಭ ಸೋಮವಾರ ಭಕ್ತಿಭಾವ ಹಾಗೂ ವಿಜ್ರಂಭಣೆಯಿಂದ ನೆರವೇರಿತು.

ಕಲ್ಯಾಣೋತ್ಸವ ಪ್ರಯುಕ್ತ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಧಾರ್ಮಿಕ ವಿಧಿ-ವಿಧಾನಗಳನ್ನು ವೇದಮೂರ್ತಿ ಉಮೇಶಸ್ವಾಮಿ ದೇವಾಂಗಮಠ ಹಾಗೂ ವೇದಮೂರ್ತಿ ನಿರಂಜನಸ್ವಾಮಿ ದೇವಾಂಗಮಠ ಅವರ ಸಾನಿಧ್ಯದಲ್ಲಿ ನೆರವೇರಿದವು.

ಶಿವ ಪಾರ್ವತಿ ಕಲ್ಯಾಣ ಮಹೋತ್ಸವ ಪ್ರಯುಕ್ತ ಭಾನುವಾರ ದೇವಸ್ಥಾನ ಆವರಣದಲ್ಲಿ ನಿಶ್ಚಯ ಕಾರಣ, ಬಳೆ ಶಾಸ್ತ್ರ, ಬಾಷ್ಟಗಿ ಕಾರಣ ನೇಕಾರ ಪೇಟೆ ಹಿರಿಯರು ಹಾಗೂ ಸಮುಂಗಳೆಯರ ಸಮ್ಮುಖದಲ್ಲಿ ಜರುಗಿದವು. ಸೆ.7 ಸೋಮವಾರ ಅರಿಷಿಣ ಹಚ್ಚುವುದು, ಸುರುಗಿ ಸುತ್ತುವುದು, ಹೋಮದ ಅಕ್ಷತೆ ನಂತರ ವೇದಘೋಷ, ಮಂತ್ರಪಠಣ ಹಾಗೂ ಮಂಗಳವಾದ್ಯಗಳ ನಡುವೆ ಸಾಮೂಹಿಕ ಅಕ್ಷತೆಯೊಂದಿಗೆ ಶಿವ-ಪಾರ್ವತಿಯರ ವಿವಾಹ ಮಹೋತ್ಸವ ನೆರವೇರಿತು. ಬಳಿಕ ಅನ್ನಪ್ರಸಾದ ವಿತರಿಸಲಾಯಿತು. ಸಂಜೆ ಶಿವ ಪಾರ್ವತಿಯರ ಉತ್ಸವ ಮೂರ್ತಿ ಹೊತ್ತ ಪಾಲಿಕೆ ಉತ್ಸವ ಮೆರವಣಿಗೆ ನೇಕಾರ ಪೇಟೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಈ ಸಂದರ್ಭದಲ್ಲಿ ಈಶ್ವರ ದೇವರ ಟ್ರಸ್ಟ್ ಅಧ್ಯಕ್ಷ ಕಾಶಪ್ಪ ಹೆಗಡೆ, ಹಿರಿಯರಾದ ಸಂಕಪ್ಪ ಮುಖೈನವರ, ನಾಮದೇವ ಮಲಗಾಂವಿ, ರುದ್ರಪ್ಪ ಪಾಟೀಲ, ನಾರಾಯಣ ಹೆಗಡೆ, ಬರಮಣ್ಣ ಮಣ್ಣನವರ, ಮಲಗಾವಿ, ಗಂಗಾಧರ ಪಟ್ಟದಕಲ್ಲ, ಉಮೇಶ ಪಟ್ಟದಕಲ್ಲ, ಬನಶಂಕರಿ ದೇವಾಂಗ ಸಮಾಜದ ಅಧ್ಯಕ್ಷ ಕುಬೇರ ಗರಡಿಮನಿ ಸೇರಿದಂತೆ ಹಲವರು ಇದ್ದರು.

ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷರ ನೇಮಕ



ಉದಯಕಾಲ ನ್ಯೂಸ್

ರಾಮದುರ್ಗ: ತಾಲೂಕಿನ ಎಂ. ಖಾನಾಪೂರ ಗ್ರಾಮದ ಯುವ ರೈತ ಮುಖಂಡ ಯಲ್ಲಪ್ಪ ಕುರಿ ಅವರನ್ನು ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ರಾಜ್ಯಾಧ್ಯಕ್ಷ ಜಿ.ಎ. ಲಕ್ಷ್ಮೀನಾರಾಯಣಗೌಡ ಅವರು ನೇಮಕ ಮಾಡಿ ಆದೇಶಿಸಿದ್ದಾರೆ.

ಚೌಸನ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ



ಉದಯಕಾಲ ನ್ಯೂಸ್

ಚಿಕ್ಕೋಡಿ: ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ; ಅವರು ವಿದ್ಯಾರ್ಥಿಗಳ ಜೀವನವನ್ನು ರೂಪಿಸುವ ಮಾರ್ಗದರ್ಶಕರು, ಪ್ರೇರಕರು ಹಾಗೂ ಆದರ್ಶ ವ್ಯಕ್ತಿಗಳಾಗಿದ್ದಾರೆ ಎಂದು ಚೌಸನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಸುರೇಂದ್ರನಾಥ್ ಟಿ. ಚೌಗುಲೆ ಹೇಳಿದರು.

ಸ್ಥಳೀಯ ಚೌಸನ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಜ್ಞಾನ, ಶಿಸ್ತು, ಉತ್ತಮ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಯ ಆಸಕ್ತಿ, ಪ್ರತಿಭೆ ಮತ್ತು ಸಾಮರ್ಥ್ಯವನ್ನು ಗುರುತಿಸಿ, ಅವರ ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಮಾರ್ಗದರ್ಶನ ನೀಡುತ್ತಾನೆ. ಪ್ರತಿಯೊಬ್ಬ ಶಿಕ್ಷಕರೂ ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಗುರುತಿಸಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು ಶಿಕ್ಷಕರ ಸೇವೆ ಸಮಾಜದ ಅಭಿವೃದ್ಧಿಗೆ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು. ಪ್ರಾಧ್ಯಾಪಕ ಡಾ. ಎನ್. ಎಸ್. ಸಿಂಧೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ತನುಜಾ ಎಸ್. ಕುಮಾರ್ ಮಾತನಾಡಿ, ಶಿಕ್ಷಕರ ದಿನವು ಶಿಕ್ಷಕರ ಕೊಡುಗೆಯನ್ನು ಸ್ಮರಿಸುವ ಹಾಗೂ ಗೌರವಿಸುವ ವಿಶೇಷ ದಿನವಾಗಿದೆ ಎಂದರು. ಶಿಕ್ಷಕರು ವಿದ್ಯಾರ್ಥಿಗಳ ಬದುಕನ್ನು ರೂಪಿಸುವ ನೇತಾರರು. ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಅನನ್ಯ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳಾದ ನರೇಂದ್ರಹವಳೇ, ಸುಧಾ ಕರಬಸ್ಸಿ, ಸುಮಯ್ಯ ನದಾಫ್, ಸಿದ್ದರಾಮ್ ಬುರ್ಲಿ, ಅವರು ಶಿಕ್ಷಕರ ದಿನಾಚರಣೆಯ ಮಹತ್ವ ಹಾಗೂ ಶಿಕ್ಷಕರ ಪಾತ್ರದ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಚೌಸನ್ ನರ್ಸರಿ ಶಾಲೆಯ ನಿರ್ದೇಶಕರಾದ ಸವಿತಾ ಹೆಗಡೆ, ಮಾಜಿ ಶಾಸಕಿ ಹಾಗೂ ಸಂಸ್ಥೆಯ ಚೇರ್‌ಪರ್ಸನ್ ಶಕುಂತಲಾ ಟಿ. ಚೌಗುಲೆ, ಪ್ರೊಫೆಸರ್ ಶ್ರೀಧರ್ ಅಲ್ಕಿ, ರಾವುತಪ್ಪ ಎಂ. ಎಚ. ಹಾಗೂ ಪ್ರಶಾಂತ್ ಪತ್ತಾರ್ ಚೌಸನ್ ನರ್ಸರಿ ಶಾಲೆ ಶಿಕ್ಷಕಿರಾದ ಉಜ್ವಲ ಮಾನೆ, ಕವಿತಾ ಹರಕೆ, ಆಸ್ಮಾ ಜಮಾದಾರ್‌ಉಪಸ್ಥಿತರಿದ್ದರು. ಸವಿತಾ ಕೋಳಿ ಪ್ರಾರ್ಥಿಸಿದರು,ಸೌಭಾಗ್ಯ ಬೋರ್ಗಾಂವೆ ಸ್ವಾಗತಿಸಿದರು, ಅನುಜಾ ಮೇತ್ರಿ ಮತ್ತು ಗಂಗೂ ಡೋಳ್ಳಿ ನಿರೂಪಿಸಿದರು ದೀಪಾ ವಾಗ್ಮೂಡೆ ವಂದಿಸಿದರು.

ಶಿಕ್ಷಕರಾಗುವವರು ಸಾಹಿತ್ಯದ ಅಭಿರುಚಿಯನ್ನೂ ಬೆಳೆಸಿಕೊಳ್ಳಬೇಕು: ಶಾಸ್ತ್ರಿ

ಉದಯಕಾಲ ನ್ಯೂಸ್

ಬೆಳಗಾವಿ: ಸಾಹಿತ್ಯಾಭಿರುಚಿ ಶಿಕ್ಷಕರ ಸಾಮರ್ಥ್ಯವನ್ನು ದ್ವಿಗುಣಗೊಳ್ಳುತ್ತದೆ. ಆದ್ದರಿಂದ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ ಎಂದು ಸಾಹಿತಿ ಪತ್ರಕರ್ತ ಎಲ್. ಎಸ್. ಶಾಸ್ತ್ರಿ ಅವರಿಂದಿಲ್ಲಿ ಹೇಳಿದರು.

ಸರಕಾರಿ ಬಿ.ಎಡ್. ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಡಾ. ರಾಧಾಕೃಷ್ಣನ್ ಸಂಸ್ಮರಣೆಯ ಅಂಗವಾಗಿ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಸಾಹಿತ್ಯ ಮನೋಲ್ಲಾಸದೊಡನೆ ಮನೋವಿಕಾಸಕ್ಕೂ ಕಾರಣವಾಗುತ್ತದೆ. ಡಾ. ರಾಧಾಕೃಷ್ಣನ್ ತಮ್ಮ ಶಿಷ್ಯವೃಂದದಲ್ಲಿ ಅಪಾರ ಗೌರವ , ಮನ್ನಣೆ ಪಡೆದ ಮಹಾ ಮೇಧಾವಿ ಶಿಕ್ಷಕರಾಗಿದ್ದರು.

ಪ್ರಭಾರ ಪ್ರಾಚಾರ್ಯರಾದ ಶ್ರೀ ಪಾರಿ ಬಸವರಾಜ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಶ್ರೀ ವಿ. ವಿ. ಸಾಲಿಮಠ ಅವರು ಆಗಮಿಸಿದ್ದರು. ಪ್ರಾಧ್ಯಾಪಕರಾದ ವಿದ್ಯಾ ಕುಂದರಗಿ ಅತಿಥಿಗಳ ಪರಿಚಯವಿತ್ತರು. ವಿದ್ಯಾರ್ಥಿಗಳು ಶಿಕ್ಷಕರ ದಿನದಹತ್ವ ಕುರಿತು ಮಾತನಾಡಿದರು. ಆರಂಭದಲ್ಲಿ ಡಾ. ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಗೌರವ ಸಲ್ಲಿಸಲಾಯಿತು.

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಜಾ, 4ನೇ ಮಹಡಿ, ಹಂತ-II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು-600 002.
044-42995000, 044-42995050

ಸ್ಥಿರಾಸ್ತಿಯ ಮಾರಾಟಕ್ಕಾಗಿ ಹರಾಜು ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] - ಸ್ಥಿರಾಸ್ತಿಗಳ ಮಾರಾಟದ ಸೂಚನೆ

2002 ರ ಹಣಕಾಸು ಆಸ್ತಿಗಳ ಸೆಕ್ಯೂರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯೂರಿಟಿ ಬಡ್ಡಿ ಜಾರಿ ಕಾಯ್ದೆಯಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆಯನ್ನು ಭದ್ರತಾ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿದೆ. ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರು (ಗಳು) ಗೆ ಸೂಚನೆ ನೀಡಲಾಗಿದೆ, ಈಕ್ವಿಟಾಸ್ ಸಣ್ಣ ಹಣಕಾಸು ಬ್ಯಾಂಕಿನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ಅವರು ಸ್ವಾಧೀನಪಡಿಸಿಕೊಂಡಿರುವ ಸೆಕ್ಯೂರ್ಡ್ ಕ್ರೆಡಿಟ್‌ಗೆ ಮಾಂಟೇಜ್ ಮಾಡಲಾದ/ವಿಧಿಸಲಾದ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ. ಸಾಲಗಾರರ (ರು) ಅಡಮಾನದಾರರು/ ಜಾಮೀನುದಾರರು/ ಸೆಕ್ಯೂರ್ಡ್ ಆಸ್ತಿಗಳ ಬಾಕಿಗಳ ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರಾಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಬಿಡ್ ಹೆಚ್ಚಳ ಬೆಲೆ	ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1	**ಶ್ರೀ ಸೋಮಪ್ಪ ಮಾದರ್ ಬಿನ್. ಹನಮಂತ್** ತಾಲೂಕ ಬಿಳಗಿ ಟಿಟಿಸಿ ಬೀರಕಬ್ಬಿ ಬಾಗಲಕೋಟ ಕರ್ನಾಟಕ-587116. **ಶ್ರೀಮತಿ ರಾಮವ್ವ ಮದರ್ ಕೋಂ. ಹನಮಂತ್** ತಾಲೂಕ ಬಿಳಗಿ ಟಿಟಿಸಿ ಬೀರಕಬ್ಬಿ ಬಾಗಲಕೋಟ ಕರ್ನಾಟಕ-587116. **ಶ್ರೀ ಹನಮಂತ್ ಮಾದರ್ C/O ಬಿನ್. ಸೋಮಪ್ಪ** ಮುತ್ತಲದಿನ್ನಿ, ತಾಲೂಕು ಬಿಳಗಿ ಬಾಗಲಕೋಟ ಪೋಸ್ಟ್ ಕರ್ನಾಟಕ-587116. **ಶ್ರೀ ದುರ್ಗಪ್ಪ ಪೂಜೇರಿ C/O ಬಿನ್ ಸೋಮಪ್ಪ,** #47 ಗುಂಡನಪಲ್ಲಿ ಬಾಗಲಕೋಟ ಕರ್ನಾಟಕ- 587313.	**ಷೆಡ್ಯೂಲ್ ಸಂಖ್ಯೆ: 1** ಆರ್‌ಡಿಪಿಆರ್ ಸಂಖ್ಯೆ: 150100301100120132 ಮತ್ತು ಗ್ರಾ.ಪಂ. ಸಂಖ್ಯೆ: 367/3 ಹೊಂದಿರುವ ಆಸ್ತಿ; ಇದು ಬಾಗಲಕೋಟೆ ಜಿಲ್ಲೆ, ಬಿಳಗಿ ತಾಲೂಕಿನ ಬೀರಕಬ್ಬಿ ಗ್ರಾಮದಲ್ಲಿದೆ. ಇದರ ಅಳತೆಗಳು: ಪೂರ್ವ-ಪಶ್ಚಿಮಕ್ಕೆ 12 ಮೀಟರ್ ಮತ್ತು ಉತ್ತರ-ದಕ್ಷಿಣಕ್ಕೆ 5 ಮೀಟರ್; ಒಟ್ಟು ವಿಸ್ತೀರ್ಣ 60.00 ಚದರ ಮೀಟರ್ (646 ಚದರ ಅಡಿ). **ಷೆಡ್ಯೂಲ್ ಸಂಖ್ಯೆ: 2** ಆರ್‌ಡಿಪಿಆರ್ ಸಂಖ್ಯೆ: 150100301100120131 ಮತ್ತು ಗ್ರಾ.ಪಂ. ಸಂಖ್ಯೆ: 367/2 ಹೊಂದಿರುವ ಆಸ್ತಿ; ಇದು ಬಾಗಲಕೋಟೆ ಜಿಲ್ಲೆ, ಬಿಳಗಿ ತಾಲೂಕಿನ ಬೀರಕಬ್ಬಿ ಗ್ರಾಮದಲ್ಲಿದೆ. ಇದರ ಅಳತೆಗಳು: ಪೂರ್ವ-ಪಶ್ಚಿಮಕ್ಕೆ 12 ಮೀಟರ್ ಮತ್ತು ಉತ್ತರ-ದಕ್ಷಿಣಕ್ಕೆ 5 ಮೀಟರ್; ಒಟ್ಟು ವಿಸ್ತೀರ್ಣ 60.00 ಚದರ ಮೀಟರ್ (646 ಚದರ ಅಡಿ).	ರೂ. 8,26,000/- ರೂ. 82,600/- ರೂ. 10,000/-	15-10-2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ: 200002484266. ಪಾವತಿಸಬೇಕಾದ ಕ್ಲೇಮ್ ಮೊತ್ತ 07.10.2025 ರಂದು ರೂ. 6,65,194/-; ಜೊತೆಗೆ 08.10.2025 ರಿಂದ ಅನ್ವಯವಾಗುವಂತೆ ಮಾಸಿಕ ಆಧಾರದ ಮೇಲಿನ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ (28.08.2026 ರಂದು ಒಟ್ಟು ಬಾಕಿ ಮೊತ್ತವು ರೂ. 9,45,716/- ಆಗಿರುತ್ತದೆ).
	ಖರೀದಿ ಮತ್ತು ಮಾರಾಟದ ಬಗ್ಗೆ ವಿವರಗಳು ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ ಸಂಖ್ಯೆ-, ಕಿರಣ್ ದ್ಯಾವಣ್ಣವರ್ 8095299287, ಶಿವಶಂಕರ ಪಾಟೀಲ್ 9449785015.				
2	**ಯಾಸ್ಮೀನ್ ಮಕಾಂದರ್ ನಿಸಾರಲಿ ಅಜೀಂ ಅಲಿ ಮಕಾಂದರ್ ವಸೀಂ ನಿಸಾರಲಿ ಮಕಾಂದರ್ (ಎಲ್ಲರೂ ಇಲ್ಲಿ ವಾಸಿಸುತ್ತಿದ್ದಾರೆ:** ಮನೆ ಸಂಖ್ಯೆ 05 ಆಶ್ರಯ ಕಾಲೋನಿ, ರುಕ್ಮಿಣಿ ನಗರ, ಬೆಳಗಾವಿ, ಬೆಳಗಾವಿ, ಕರ್ನಾಟಕ - 590016).	ಐಟಂ ಸಂಖ್ಯೆ: 1 ಆಸ್ತಿ ವಿವರಗಳು: ಪಿಐಡಿ ಸಂಖ್ಯೆ: 153122, ಸರ್ವೆ ಸಂಖ್ಯೆ: 1292, ಮನೆ ಸಂಖ್ಯೆ: 105/5ಎ, ವಾರ್ಡ್ ಸಂಖ್ಯೆ: 54. ಸ್ಥಳ: ರುಕ್ಮಿಣಿ ನಗರ, ಬೆಳಗಾವಿ. ವ್ಯಾಪ್ತಿ: ಬೆಳಗಾವಿ ತಾಲೂಕು ಮತ್ತು ಬೆಳಗಾವಿ ಜಿಲ್ಲೆ. ಅಳತೆ: ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣ. ಒಟ್ಟು ವಿಸ್ತೀರ್ಣ: 600 ಚದರ ಅಡಿ.	ರೂ. 20,98,000/- ರೂ. 2,09,800/- ರೂ. 10,000/-	15-10-2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ :- 700009473194 / 600000020846. ಪಾವತಿಸಬೇಕಾದ ಕ್ಲೇಮ್ ಮೊತ್ತ 26.06.2025 ರಂತೆ ರೂ. 16,07,538/- ಜೊತೆಗೆ 27.06.2025 ರಿಂದ ಮಾಸಿಕ ಬಡ್ಡಿ ಲೆಕ್ಕಾಚಾರದೊಂದಿಗೆ ಹೆಚ್ಚುವರಿ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (ಒಟ್ಟು ಬಾಕಿ ಮೊತ್ತವು 26.08.2026 ರಂತೆ ರೂ. 23,01,183/- ಆಗಿರುತ್ತದೆ).
	ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ವಿವರಗಳು ಹಾಗೂ ವಿಚಾರಣೆಗಳಿಗಾಗಿ ಇವರನ್ನು ಸಂಪರ್ಕಿಸಿ: ಶಿವಗೌಡ 9741873241, ಶಿವಶಂಕರ ಪಾಟೀಲ್ 9449785015.				
3	**ಬಾಷಾ ಮಕಾಂದರ್ ಬಾನು ಮಕಾಂದರ್ ಅಬೂಬಕರ್ ಮಕಾಂದಾರ** (ಇಬ್ಬರೂ ವಾಸ: ಮನೆ ಸಂಖ್ಯೆ 04 ರುಕ್ಮಿಣಿ ನಗರ, ಬೆಳಗಾವಿ, ಬೆಳಗಾವಿ, ಕರ್ನಾಟಕ - 590016.	ಷೆಡ್ಯೂಲ್ ಆಸ್ತಿ: ಐಟಂ ಸಂಖ್ಯೆ: 1 - ಆಸ್ತಿ ಪಿಐಡಿ 116702, ಆಸ್ತಿ ಸಂಖ್ಯೆ 4, ವಾರ್ಡ್ ಸಂಖ್ಯೆ 54, ಮನೆ ಸಂಖ್ಯೆ 106/4ಬಿ, ಸಿಟಿಎಸ್ ಸಂಖ್ಯೆ 1292 ಅನ್ನು ಹೊಂದಿರುವ, ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲೂಕು, ಬೆಳಗಾವಿಯ ರುಕ್ಮಿಣಿ ನಗರದ ವ್ಯಾಪ್ತಿಯಲ್ಲಿರುವ ಆಸ್ತಿ ಮತ್ತು ಇದರ ಅಳತೆಯು ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣ ದಿಕ್ಕುಗಳಲ್ಲಿ ಒಟ್ಟು ವಿಸ್ತೀರ್ಣ 400 ಚದರ ಅಡಿಗಳಷ್ಟಿದೆ. ನಿರ್ಮಿತ ಪ್ರದೇಶವು 240 ಚದರ ಅಡಿಗಳಷ್ಟಿದೆ.	ರೂ. 18,72,000/- ರೂ. 1,87,200/- ರೂ. 10,000/-	15-10-2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ:- 700008216770. ಪಾವತಿಸಬೇಕಾದ ಮೊತ್ತ 19.05.2025 ರಂತೆ ರೂ. 8,86,444/- ಜೊತೆಗೆ 20.05.2025 ರಿಂದ ಮಾಸಿಕ ಬಡ್ಡಿ ಲೆಕ್ಕಾಚಾರದೊಂದಿಗೆ ಹೆಚ್ಚುವರಿ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (26.08.2026 ರಂತೆ ಒಟ್ಟು ಬಾಕಿ ಮೊತ್ತ ರೂ. 12,21,025/-).
	ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ವಿವರಗಳು ಹಾಗೂ ವಿಚಾರಣೆಗಳಿಗಾಗಿ ಇವರನ್ನು ಸಂಪರ್ಕಿಸಿ: ಶಿವಗೌಡ 9741873241, ಶಿವಶಂಕರ ಪಾಟೀಲ 9449785015.				

ಖರೀದಿದಾರರು/ಬಿಡ್ದರ್‌ಗಳು ಮುಂಗಡ ಹಣ ಠೇವಣಿ (ಇಎಂಡಿ) ಮೊತ್ತವನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಡಿಡಿ ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ - 200000807725 ಮತ್ತು ಐಎಫ್‌ಎಸ್‌ಸಿ ಕೋಡ್- ESFB0001001, ಭಾಗ್ಯಮ್ ಗ್ಯಾಲೇರಿಯಾ ಹೊಸ ಸಂಖ್ಯೆ. 18, ಬಿರುಲ್ಲಾ ರಸ್ತೆ, ಟಿ-ನಗರ, ಚೆನ್ನೈ-600 117, **ದಿನಾಂಕ: 14-10-2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.
ಇ-ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ, ದಯವಿಟ್ಟು www.Equitasbank.in ಮತ್ತು **https://www.bankeauctions.com** ನಲ್ಲಿ ನೀಡಿರುವ ಲಿಂಕ್ ಅನ್ನು ನೋಡಿ.
ದಿನಾಂಕ: 09.09.2026, ಸ್ಥಳ: ಬೆಳಗಾವಿ — **ಸಹಿ/- ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

Udayakala is published by K.N.Puttalingaiah from no 1576, Rame Gowda Building, 2nd floor, V.V.Road, Mandya-571 401 on behalf of Anikethana Publication and Printers edited by K.N.Puttalingaiah and Printed by M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd Sy no. 650/3, Uchagaon- Belgundi ByPass Road, Uchagaon, Belgaum -501128, Manipal Media Network Limited Udayavani Building, Udayavani Road Manipal – 576 104, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi,ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030, ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, Shimoga- 577 201. All rights reserved. Reproduction in whole or in part without written permission is prohibited. RNI REG NO. 71090/97.Volume:30 Issue: 86